


# ಕಾಯಕ ಶ್ರಮ

■ ಪ. ರಾಮಕೃಷ್ಣ ಶಾಸ್ತ್ರಿ
ಕಲೆ: ಸಂತೋಷ್ ಸಸಿಹಿತ್ಲು

ಸುರಪುರದ ರಾಜ ಪ್ರಜೆಗಳ ಸುಖಕ್ಕಾಗಿ ಸದಾಕಾಲ ಚಿಂತನೆ ಮಾಡುತ್ತಿದ್ದ. ಅವರು ನೆಮ್ಮದಿಯಿಂದ ಬದುಕಬೇಕು ಎಂಬ ಸದಾಶಯದಿಂದ ರಸ್ತೆಗಳನ್ನು ಅಭಿವೃದ್ಧಿಗೊಳಿಸಿದ. ಸೇತುವೆಗಳನ್ನು ಮಾಡಿಸಿದ. ಬೀದಿದೀಪಗಳನ್ನು ಹಾಕಿಸಿದ. ಹೊಸ ತಂತ್ರಜ್ಞಾನವನ್ನು ಒದಗಿಸುವ ಪರಿಣತರಿಗೆ ಅನುಕೂಲ ಕಲ್ಪಿಸಿದ. ಇದರಿಂದ ಬಹು ಜನರು ಸಂತುಷ್ಟರಾದರು. ಈ ದೊರೆ ದೇವರ ಇನ್ನೊಂದು ಅವತಾರ. ಇವನು ಪಟ್ಟವೇರಿದ ಮೇಲೆ ನಮಗೆ ಸುಖದಿಂದ ಇರಲು ಅಗತ್ಯವಾದ ಎಲ್ಲ ಸೌಲಭ್ಯಗಳೂ ಲಭಿಸಿದವು ಎಂದು ಅವನನ್ನು ಹಾಡಿ ಹೊಗಳತೊಡಗಿದರು.

ಅದೇ ಸಮಯ ರಾಜನ ಹುಟ್ಟುಹಬ್ಬ ಸಮೀಪಿಸಿತು. ಪ್ರಜೆಗಳೇ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಬೇಕೆಂದು ನಿರ್ಧರಿಸಿದರು. ಪ್ರತಿಯೊಬ್ಬ ಪ್ರಜೆಯೂ ಸಮಾರಂಭದಲ್ಲಿ ಬಾಗವಹಿಸಬೇಕು. ನೆಚ್ಚಿನ ದೊರೆಗೆ ಒಂದು ಉಡುಗೊರೆ ನೀಡಿ ದೀರ್ಘಾಯಸ್ಸನ್ನು ಕೋರಬೇಕು ಎಂದು ಊರಿಡೀ ಡಂಗುರ ಸಾರಿಸಿದರು. ದೊರೆಯ ಹುಟ್ಟುಹಬ್ಬ ಎಲ್ಲರೂ ಊಹಿಸಿದಂತೆ ವೈಭವದಿಂದ ನಡೆಯಿತು. ಧನಿಕರು, ವರ್ತಕರು ಇನ್ನಿತರ ಬೇರೆ ಬೇರೆ ಉದ್ಯಮದವರು ವಾಹನಗಳಲ್ಲಿ ಕುಳಿತುಕೊಂಡು ಸಮಾರಂಭಕ್ಕೆ ಆಗಮಿಸಿದರು. ಬೆಲೆಬಾಳುವ ಉಡುಗೊರೆಗಳನ್ನು ರಾಜನಿಗೆ ಅರ್ಪಿಸಿ ಅಭಿನಂದನೆ ಸಲ್ಲಿಸಿ ಔತಣವನ್ನು ಸ್ವೀಕರಿಸಿ ಹೊರಟುಹೋದರು.

ಕೊನೆಗೆ ಇಬ್ಬರು ರಾಜನ ಭೇಟಿಗೆ ಬಂದರು. ಅವರು ಧರಿಸಿದ ಉಡುಪುಗಳು ಹಳತಾಗಿ ಅಲ್ಲಲ್ಲಿ ಹರಿದಿದ್ದವು. ಇಬ್ಬರ ಮುಖದಲ್ಲೂ ಸಂತಸದ ಕಳೆಯಿರಲಿಲ್ಲ. ಆದರೂ ಒಬ್ಬ ಬಟ್ಟೆಯಲ್ಲಿ ಸುತ್ತಿ ತಂದ ಬೆಲೆಬಾಳುವ ಪಟ್ಟೆ ವಸನವನ್ನು ರಾಜನ ಮುಂದಿರಿಸಿ, 'ದೊರೆಗಳೆಂದರೆ ನಮ್ಮ ಪಾಲಿನ ದೇವರು. ಭಗವಂತನು ನಿಮಗೆ ದೀರ್ಘಾಯಸ್ಸನ್ನು ಕರುಣಿಸಲಿ' ಎಂದು ಕೈಜೋಡಿಸಿದ.

ಮತ್ತೊಬ್ಬನು ಹಳೆಯ ಚೀಲದಲ್ಲಿ ತುಂಬಿಸಿ ತಂದ ಘಮಘಮಿಸುವ ಬಾಸ್ಮತಿ ಅಕ್ಕಿಯನ್ನು ರಾಜನ ಪಾದಗಳ ಬಳಿಯಿರಿಸಿ ಸಾಷ್ಟಾಂಗ ವಂದಿಸಿದ. 'ಕರುಣಾಳು ದೊರೆಗಳನ್ನು ದೇವರು ಚೆನ್ನಾಗಿಟ್ಟಿರಲಿ' ಎಂದು ಪ್ರಾರ್ಥಿಸಿದ. ಅವರಿಬ್ಬರನ್ನೂ ಕಂಡು ರಾಜನಿಗೆ ಎಲ್ಲಿಲ್ಲದ ಕೋಪ ಬಂದಿತು. 'ಯಾರಿವರು ಪರದೇಶಿಗರು? ಇವರ ಉಡುಪು ಕಂಡರೆ ಹೊಟ್ಟೆ ತೊಳಸುತ್ತದೆ. ಬೆಲೆಬಾಳುವ ಕಾಣಿಕೆ ತಂದಿದ್ದಾರೆ. ಇದನ್ನು ಎಲ್ಲಿಂದ ಕದ್ದು ತಂದಿದ್ದಾರೆ ಎಂದು ವಿಚಾರಿಸಿ. ಬಳಿಕ ಕಠಿಣ ಶಿಕ್ಷೆ ವಿಧಿಸಿ' ಎಂದು ಮಹಾಮಂತ್ರಿಯನ್ನು ಕರೆದು ಆಜ್ಞಾಪಿಸಿದ.

ಮಹಾಮಂತ್ರಿಯ ಮುಖ ನೋವಿನಿಂದ ಮುದುಡಿತು. ಆತ, 'ದೊರೆಯೇ, ಈ ಇಬ್ಬರೂ ಕಳ್ಳರಲ್ಲ, ಸುಳ್ಳರಲ್ಲ. ನಮ್ಮ ರಾಜ್ಯದ ಪ್ರಜೆಗಳು ಸುಖವಾಗಿ ಮೂರು ಹೊತ್ತೂ ಊಟ ಮಾಡಲು ಒಬ್ಬನು ತನ್ನ ಬದುಕನ್ನು ಗಂಧದ ಕೊರಡಿನಂತೆ ತೇಯುತ್ತಿದ್ದಾನೆ, ಇನ್ನೊಬ್ಬನ ಶ್ರಮ ಇಲ್ಲದೆ ಹೋದರೆ ನಮ್ಮ ಪ್ರಜೆಗಳು ಬಣ್ಣಬಣ್ಣದ ಬಟ್ಟೆ ಧರಿಸಿ ಸಂತೋಷಪಡಲು ಸಾಧ್ಯವೇ ಇರಲಿಲ್ಲ' ಹೇಳಿದ.

ರಾಜ ಜೋರಾಗಿ ನಕ್ಕುಬಿಟ್ಟ. 'ಅಂದರೆ? ಇವರು ಎಲ್ಲರಿಗೂ ಊಟ, ಬಟ್ಟೆ ಕೊಡುವ ಮಹಾಧನಿಕರೆಂದಾಯಿತು? ಉಡಲು ಬಟ್ಟೆಯೂ ಇಲ್ಲದೆ ಒಡಲು ಬೆನ್ನಿಗೆ ಅಂಟಿರುವ ಇವರು ನಮ್ಮ ಪ್ರಜೆಗಳಿಗೆ ಏನನ್ನು ಕೊಟ್ಟಾರು?' ಎಂದು ಗೇಲಿ ಮಾಡಿದ.

ಮಂತ್ರಿ ವಿಷಾದದಿಂದ ತಲೆ ತಗ್ಗಿಸಿದ. ಅವನ ಕಣ್ಣಂಚಿನಲ್ಲಿ ಹನಿನೀರು ಒಸರಿತು. 'ದೊರೆಯೇ, ನಾನು ಹೇಳಿದ್ದು ತಮಾಷೆಯ ಮಾತಲ್ಲ, ದೇವರಾಣೆ ಸತ್ಯ. ಇವರಲ್ಲಿ ಒಬ್ಬನು ಅನ್ನ ಬೆಳೆಯಲು ಮಳೆ, ಬಿಸಿಲೆಂದಿಲ್ಲದೆ ಶ್ರಮಿಸುವ ರೈತ. ಇನ್ನೊಬ್ಬನು ಇಡೀ ವರ್ಷ ಮಗ್ಗದ ಮುಂದೆ ಕುಳಿತು ನೂಲಿನಿಂದ ಬಟ್ಟೆ ನೇಯುವ ನೇಕಾರ' ವಿವರಿಸಿದ.

'ಹೌದೇ? ಎಲ್ಲರಿಗೂ ಅನ್ನ ಬೆಳೆಯುವ ಇವನು, ಬಟ್ಟೆ ನೇಯುವ ಅವನು ಶ್ರೀಮಂತರಂತೆ ಸಾರೋಟಿನಲ್ಲಿ ಬರಬೇಕಿತ್ತಲ್ಲವೆ?' ದೊರೆ ಪ್ರಶ್ನಿಸಿದ. 'ಎಲ್ಲಿಯ ಸಾರೋಟು ದೊರೆ? ನಾವು ವರ್ತಕರಿಗೆ, ಉದ್ಯಮಿಗಳಿಗೆ ಬೇಕಾದಷ್ಟು ಸವಲತ್ತು ಕೊಟ್ಟು ಅವರನ್ನು ಧನಿಕರನ್ನಾಗಿ ಮಾಡಿದೆವು. ಬಡರೈತನಿಂದ ಧಾನ್ಯಗಳನ್ನು, ನೇಕಾರನಿಂದ ಬಟ್ಟೆಯನ್ನು ಮೂರು ಕಾಸಿಗೆ ಕೊಳ್ಳುವ ಉದ್ಯಮದವರು ಅದರಿಂದ ಸಿರಿವಂತರಾದರು. ಆದರೆ ಬಡವರಾಗಿಯೇ ಉಳಿದುಕೊಂಡ ಇವರ ಸಂಕಷ್ಟವನ್ನು ನಾವು ಎಂದಿಗೂ ವಿಚಾರಿಸಲಿಲ್ಲ, ಹೀಗಾಗಿ ಇವರು ದುಡಿಮೆ ಮಾಡಿದರೂ ಸುಖವಾಗಿ ಉಣಲಿಲ್ಲ, ಮೈತುಂಬ ಬಟ್ಟೆ ಧರಿಸಲಿಲ್ಲ' ಎಂದು ಹೇಳಿದ ಮಂತ್ರಿ.

ರಾಜನ ಒಳಗಣ್ಣು ತೆರೆಯಿತು. ಛೇ! ನಿಜವಾಗಿಯೂ ದೇಶಕ್ಕಾಗಿ ಯಾರು ದುಡಿಯುತ್ತಿದ್ದಾರೋ ಅವರ ಯೋಗಕ್ಷೇಮ ತಾನು ವಿಚಾರಿಸಲಿಲ್ಲ. ಯಾರ ಶ್ರಮದಿಂದ ಪ್ರಜೆಗಳು ಸುಖವಾಗಿರುತ್ತಾರೋ ಅವರಿಗೆ ಸೌಲಭ್ಯಗಳನ್ನು ನೀಡಲಿಲ್ಲ ಎಂಬ ತನ್ನ ತಪ್ಪನ್ನು ಅರಿತುಕೊಂಡ. ಇಬ್ಬರನ್ನೂ ಬಳಿಗೆ ಕರೆದು ಪ್ರೀತಿಯಿಂದ ಆಲಿಂಗಿಸಿದ. 'ನನಗೆ ಉದ್ಯಮ ಮುಖ್ಯವಲ್ಲ, ಉತ್ಪನ್ನ ಮುಖ್ಯ. ಮುಂದೆ ಜೀವಕ್ಕಿಂತ ಹೆಚ್ಚಾಗಿ ನಿಮ್ಮನ್ನು ಪ್ರೀತಿಸುತ್ತೇನೆ' ಎಂದು ಹೇಳಿದ. ■